# ದಂಡಿಕೆರೆ ಒಂದು ಸಾಂಸ್ಕೃತಿಕ ಅಧ್ಯಯನ

**ವರ್ಷಿತ**

ದ್ವಿತೀಯ ಬಿ.ಸಿ.ಎ. ವಿದ್ಯಾರ್ಥಿನಿ, ಎಸ್.ಆರ್.ಎಸ್. ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ.

**DOI: https://doi.org/10.5281/zenodo.17487185**

## ABSTRACT:

ದಂಡಿಕೆರೆ ಗ್ರಾಮದ ಸಾಂಸ್ಕೃತಿಕ, ಐತಿಹಾಸಿಕ ಮತ್ತು ಭೌಗೋಳಿಕ ಅಂಶಗಳ ಅಧ್ಯಯನವನ್ನು ಈ ಲೇಖನವು ಪ್ರಸ್ತುತಪಡಿಸುತ್ತದೆ. ಬೆಂಗಳೂರು–ಪುಣೆ ಹೆದ್ದಾರಿಯಲ್ಲಿರುವ ಸಿರಾ ಬಳಿ ಇರುವ ಈ ಪುಟ್ಟ ಹಳ್ಳಿಯು ಚಾರಿತ್ರಿಕವಾಗಿ ಕಸ್ತೂರಿರಂಗಪ್ಪನಾಯಕನ ಆಳ್ವಿಕೆಗೆ ಒಳಪಟ್ಟಿತ್ತು. 'ದಂಡು' (ಸೈನ್ಯ) ಮತ್ತು 'ಕೆರೆ' ಯಿಂದಾಗಿ ಇದಕ್ಕೆ ದಂಡಿಕೆರೆ ಎಂಬ ಹೆಸರು ಬಂದಿದೆ ಎಂದು ಸ್ಥಳನಾಮ ಅಧ್ಯಯನ ಹೇಳುತ್ತದೆ. ಈ ಗ್ರಾಮದಲ್ಲಿರುವ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಐತಿಹಾಸಿಕ ಹೋರಾಟಗಳಿಗೆ ಸಾಕ್ಷಿಯಾಗಿವೆ. ಇಲ್ಲಿನ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿ ದೇಗುಲದ ಹಿನ್ನೆಲೆ, ವಿಶಿಷ್ಟ ಆಚರಣೆಗಳು (ಗಣೇಶ ಚತುರ್ಥಿ ನಿಷಿದ್ಧ), ಕೃಷಿ ಪ್ರಧಾನ ಜೀವನ ಮತ್ತು ಇನ್ಫೋಸಿಸ್‌ನ ಸೋಲಾರ್ ಪ್ಲಾಂಟ್ ನಿಂದ ಉದ್ಯೋಗಾವಕಾಶ ಪಡೆದಿರುವ ಬಗ್ಗೆ ಲೇಖನವು ವಿವರಿಸುತ್ತದೆ. ಒಟ್ಟಾರೆಯಾಗಿ, ಈ ಅಧ್ಯಯನವು ದಂಡಿಕೆರೆ ಗ್ರಾಮದ ಸಮಗ್ರ ಚಿತ್ರಣವನ್ನು ನೀಡುತ್ತದೆ.

## KEYWORDS:

ದಂಡಿಕೆರೆ, ಕಸ್ತೂರಿರಂಗಪ್ಪನಾಯಕ, ವೀರಗಲ್ಲು, ಪಾರ್ಥಲಿಂಗೇಶ್ವರ ಸ್ವಾಮಿ, ಸಾಂಸ್ಕೃತಿಕ ಅಧ್ಯಯನ.

ಬೆಂಗಳೂರಿನಿಂದ ತುಮಕೂರು ಮಾರ್ಗವಾಗಿ ಪುಣೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಸಿರಾ ಎಂಬ ಐತಿಹಾಸಿಕ ನಗರ ಕಂಡುಬರುತ್ತದೆ. ಅದೇ ಮಾರ್ಗವಾಗಿ ಇಲ್ಲಿಂದ ಮುಂದೆ ಜವಗೊಂಡನಹಳ್ಳಿ ಎಂಬ ಊರು ಬರುತ್ತದೆ. ಅಲ್ಲಿಂದ ಎಡಭಾಗಕ್ಕೆ 5 ಕಿ.ಮೀ ಕ್ರಮಿಸಿದರೆ ದಂಡಿಕೆರೆ ಎಂಬ ಪುಟ್ಟ ಹಳ್ಳಿಯು ಚರಿತ್ರೆಯ ಶಿಲಾಶಿಲ್ಪಗಳ ನಿದರ್ಶನವಾಗಿ ಸ್ವಾಗತಿಸುತ್ತದೆ. ಈ ಪುಟ್ಟ ಹಳ್ಳಿಯು ಪ್ರಗತಿಯ ಹಿನ್ನೆಲೆಯಲ್ಲಿ ಕುಗ್ರಾಮವಾಗಿರಬಹುದು. ಆದರೆ ಚಾರಿತ್ರಿಕ ಹಿನ್ನೆಲೆಯಲ್ಲಿ ತನ್ನದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿದೆ. ಈ ಹಳ್ಳಿಯು ಸಿರಾ ತಾಲ್ಲೂಕಿಗೆ ಒಳಪಡುತ್ತದೆ.

### ದಂಡಿಕೆರೆ ಸ್ಥಳನಾಮ ಅಧ್ಯಯನ

ಚಾರಿತ್ರಿಕವಾಗಿ: ದಂಡಿಕೆರೆ ಗ್ರಾಮವು ಬಹಳ ವರ್ಷಗಳ ಹಿಂದೆ ಕಸ್ತೂರಿರಂಗಪ್ಪನಾಯಕನ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿಂದ ಹೀಗೆ 23 ಕಿ.ಮೀ ದೂರ

ಸಾಗಿದರೆ ಸಿರಾ ಎಂಬ ಊರಿನಲ್ಲಿ ರಾಜರ ಆಳ್ವಿಕೆ ಇತ್ತು ಎಂದು ಸಾರಲು ಅದಕ್ಕೆ ಸಾಕ್ಷಿಯಾಗಿ ನಿಂತಿರುವ ಸಿರಾ ಕೋಟೆಯೇ ಸಾಕ್ಷಿಯಾಗಿದೆ. ಹೀಗೆ ಒಮ್ಮೆ ಕಸ್ತೂರಿರಂಗಪ್ಪನಾಯಕರು ತನ್ನ ಸೈನ್ಯವನ್ನು ಗುಂಪು (ದಂಡು) ಮಾಡಿ ತನ್ನ ಒಟ್ಟು ಸೈನ್ಯವಾದ ಅಶ್ವದಳ, ಗಜದಳ ಹೀಗೆ ನಾನಾ ರೀತಿಯ ದಂಡನ್ನು ಈ ಊರಿನ ಮುಂಭಾಗದಲ್ಲಿರುವ ಕೆರೆಯ ಮುಂದೆ ನಿಲ್ಲಿಸಿದ್ದರು.

ಹೀಗೆ ಕಸ್ತೂರಿರಂಗಪ್ಪನಾಯಕರು ತನ್ನ ಎದುರಾಳಿ ಸೈನ್ಯವನ್ನು ಎದುರಿಸಲು ತನ್ನ ದಂಡನ್ನು ಕೆರೆಯ ಪಕ್ಕದಲ್ಲಿ ನಿಲ್ಲಿಸುತ್ತಿದ್ದರು. ಈ ರೀತಿ ಸಾಗರದ ಅಲೆಗಳಂತೆ ನಿಂತಿರುವ ಸೈನ್ಯವನ್ನು ನೋಡಿ ಎದುರಾಳಿಗಳು ಹೆದರಿ ಅಲ್ಲಿಂದ ಪಲಾಯನ ಮಾಡುತ್ತಿದ್ದರಂತೆ ಮತ್ತು ಕೆರೆಯ ಪಕ್ಕ ದಂಡು ನೆಲೆಸಿದ್ದ ಕಾರಣ ದಂಡು ಮತ್ತು ಕೆರೆ ಎನ್ನುವುದು ದಂಡಿಕೆರೆ ಎಂಬ ಹೆಸರನ್ನು ಹೊಂದಿದೆ ಎಂಬುದು ಚಾರಿತ್ರಿಕ ನೆಲೆಯಿಂದ ಕಂಡುಬರುತ್ತದೆ.

ಜನಪದೀಯವಾಗಿ: ದಂಡಿಕೆರೆ ಹೆಸರಿನ ನಾಮಕರಣದ ಬಗ್ಗೆ ಜನಪದರ ದೃಷ್ಟಿಯಲ್ಲಿ ನೋಡುವುದಾದರೆ, ರಾಜ ಶ್ರೀ ಕಸ್ತೂರಿರಂಗಪ್ಪನಾಯಕರು ಪ್ರತೀ ತಿಂಗಳು ಹುಣ್ಣಿಮೆಯ ದಿನದಂದು ತಮ್ಮ ಮನಃಶಾಂತಿ ಹಾಗೂ ಪ್ರಕೃತಿಯ ಸೊಬಗನ್ನು ಸವಿಯಲು ದಂಡಿನ ಸಮೇತ ಬರುತ್ತಿದ್ದರು. ತನ್ನ ರಕ್ಷಣೆಗೆಂದು ಜೊತೆಗೆ ಕರೆತಂದ ಆ ದಂಡನ್ನು ಕೆರೆ ಬಳಿ ನಿಲ್ಲಿಸಿದ್ದರು. ಆದ್ದರಿಂದ ಈ ಗ್ರಾಮಕ್ಕೆ ದಂಡಿಕೆರೆ ಎಂದು ಹೆಸರು ಬಂದಿದೆ ಎಂಬುದು ವಾಡಿಕೆಯಿದೆ.

**ದಂಡಿಕೆರೆಯಲ್ಲಿನ ಶಿಲಾ ಶಿಲ್ಪಗಳು:**

ದಂಡಿಕೆರೆ ಗ್ರಾಮದ ಮುಂಭಾಗದಲ್ಲಿ ಒಂದು ಅರಳಿಕಟ್ಟೆ ಕಂಡುಬರುತ್ತದೆ. ಈ ಮರದ ಕೆಳಗೆ ಸಾಲಾಗಿ ನಿಂತಿರುವ ಐದು ವೀರಗಲ್ಲುಗಳು, ಒಂದು ವೀರಮಾಸ್ತಿಶಿಲ್ಪ, ಒಂದು ಮಾಸ್ತಿಶಿಲ್ಪ ಮತ್ತು ಒಂದು ಶೈವ ಯತಿಯ ಶಿಲ್ಪವು ಐತಿಹಾಸಿಕವಾದ ಚರ್ಚೆಗೆ ಮತ್ತು ಕುತೂಹಲಕ್ಕೆ ಎಡೆಮಾಡಿಕೊಡುತ್ತದೆ.



ಅಷ್ಟೇ ಅಲ್ಲ ಈ ವೀರರು ಯಾವುದೋ ಕದನದಲ್ಲಿ ಭಾಗಿಯಾಗಿ ಹೋರಾಡಿದ ಕಥೆಯನ್ನು ಹೇಳುವ ರೀತಿ ಕಂಡುಬರುತ್ತವೆ. ವೀರಗಲ್ಲುಗಳು ಎಂದರೆ ಹೋರಾಟದಲ್ಲಿ ಮಡಿದ ವೀರರ ಸ್ಮರಣಾರ್ಥಕವಾಗಿ ನೆಟ್ಟ ಶಿಲಾಶಿಲ್ಪಗಳು. ವೀರರು ಹೋರಾಡುತ್ತಿರುವ

ಕೆತ್ತನೆಯ ಚಿತ್ರ ಹಾಗೂ ಬಿಲ್ಲು, ಬಾಣ, ಕತ್ತಿ, ಖಡ್ಗ ಮತ್ತು ಇತರೆ ಆಯುಧಗಳನ್ನು ಹಿಡಿದ ವೀರರ ಉಬ್ಬು ಶಿಲಾಶಿಲ್ಪಗಳಾಗಿರುತ್ತವೆ. ಮಾಸ್ತಿಗಲ್ಲು ಎಂದರೆ ಯುದ್ಧದಲ್ಲಿ ಹೋರಾಡಿ ವೀರರು ಮಡಿದರೆ, ಆ ವೀರರ ಸತಿಯರು ಸ್ವಯಂ ಸತಿ ಸಹಗಮನ ಮಾಡಿಕೊಳ್ಳುತ್ತಾರೆ. ಆ ಸ್ಮರಣಾರ್ಥವಾಗಿ ನೆಟ್ಟ ಶಿಲ್ಪಗಳನ್ನು ಮಾಸ್ತಿಶಿಲ್ಪವೆಂದು ಕರೆಯುತ್ತಾರೆ. ಇದರಲ್ಲಿ ವೀರನು ಕತ್ತಿ ಹಿಡಿದು ನಿಂತಿರುವುದು, ಕತ್ತಿ ಬೀಸುತ್ತಿರುವುದು, ಒಬ್ಬ ವೀರನ ಜೊತೆ ಎಡ ಮತ್ತು ಬಲಬದಿಯಲ್ಲಿ ಮಹಾಸತಿಯರು ನಿಂತಿರುವುದು, ಶಿವಲಿಂಗದ ಜೊತೆ ಶೈವ ಯತಿಯು ನಿಂತಿರುವುದು, ಈ ಶಿಲಾಶಿಲ್ಪಗಳ ವಿಶೇಷತೆಗಳಾಗಿವೆ. ಇಲ್ಲಿ ಪ್ರಸ್ತುತ ಒಟ್ಟು ಎಂಟು ಶಿಲಾಶಿಲ್ಪಗಳಿವೆ. ಇನ್ನು ಕೆಲವು ಜನರ ನಿರ್ಲಕ್ಷ್ಯತೆಯಿಂದ ಮಣ್ಣಿನಲ್ಲಿ ಹೂತು ಹೋಗಿವೆ ಎಂಬ ವಿವರಗಳು ಗ್ರಾಮದ ಹಿರಿಯರಿಂದ ತಿಳಿದುಬರುತ್ತವೆ. ಇಲ್ಲಿನ ಒಂದೊಂದು ಶಿಲ್ಪ ಕಲ್ಲುಗಳು ಒಂದೊಂದು ಕಥೆಗೆ ಸಾಕ್ಷಿಯಾಗಿವೆ.






**ವೀರಗಲ್ಲು ವೀರಗಲ್ಲು ವೀರಮಾಸ್ತಿಶಿಲ್ಪ ಶೈವಯತಿಯ ಶಿಲ್ಪ**

ಈ ಗ್ರಾಮವು ರಾಜರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಲು ಈ ವೀರಗಲ್ಲುಗಳು ಮತ್ತು ಮಹಾಸತಿಕಲ್ಲುಗಳೇ ಇಂದಿಗೂ ಜೀವಂತ ಸಾಕ್ಷಿಯಾಗಿ ನಿಂತಿವೆ. ಪ್ರಸ್ತುತ ದಿನಮಾನಗಳಲ್ಲಿ ಗ್ರಾಮದ ಜನರು ಈ ವೀರಗಲ್ಲುಗಳನ್ನು ಪೂಜಿಸುತ್ತಾರೆ ಮತ್ತು ಈ ಸ್ಥಳಕ್ಕೆ ಇಲ್ಲಿನ ಸ್ಥಳೀಕರು 'ಈರನಗುಡಿ' ಎಂದು ಕರೆಯುತ್ತಾರೆ.

**ಭೌಗೋಳಿಕ ನೆಲೆಯಲ್ಲಿ ದಂಡಿಕೆರೆ:**

ದಂಡಿಕೆರೆ ಎಂಬುದು ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಇರುವ ಒಂದು ಗ್ರಾಮವಾಗಿದೆ. ಇದು ಉಪವಿಭಾಗ ಶಿರಾ ಯಿಂದ 23 ಕಿ.ಮೀ ದೂರದಲ್ಲಿದೆ. ಮತ್ತು ಜಿಲ್ಲೆಯಿಂದ 73 ಕಿ.ಮೀ ದೂರದಲ್ಲಿದೆ. 2009 ರ ಅಂಕಿ-ಅಂಶಗಳ ಪ್ರಕಾರ ಹುಣಸೆಹಳ್ಳಿ, ದಂಡಿಕೆರೆ ಗ್ರಾಮದ ಗ್ರಾಮ ಪಂಚಾಯಿತಿ. ಇದರ ಪಿನ್ ಕೋಡ್ 572139 ಆಗಿದೆ. ದಂಡಿಕೆರೆ ಗ್ರಾಮವು ತುಮಕೂರು ಪ್ರದೇಶದ ಸಜೀವ ಭಾಗವಾಗಿದ್ದು ತನ್ನದೇ ಆದ ಸ್ಥಾನವನ್ನು ಹೊಂದಿದೆ.

ಜನಗಣತಿ 2011 ರ ಪ್ರಕಾರ ದಂಡಿಕೆರೆ ಗ್ರಾಮವು ಒಟ್ಟು 493.59 ಹೆಕ್ಟೇರ್

ಭೂ ವಿಸ್ತೀರ್ಣ ಹೊಂದಿದೆ. ದಂಡಿಕೆರೆಯ ಹತ್ತಿರದ ಪಟ್ಟಣ ಶಿರಾ ಆಗಿದ್ದು ಎಲ್ಲಾ ಪ್ರಮುಖ ಆರ್ಥಿಕ ಚಟುವಟಿಕೆಗಳಿಗಾಗಿ ಈ ಗ್ರಾಮವು ಶಿರಾ ಪಟ್ಟಣದ ಮೇಲೆ ಅವಲಂಬಿತವಾಗಿದೆ. 2011 ರ ಜನಗಣತಿಯ ಪ್ರಕಾರ ಈ ಗ್ರಾಮವು ಒಟ್ಟು 80 ಮನೆಗಳನ್ನು ಹೊಂದಿದೆ. ಒಟ್ಟು ಜನಸಂಖ್ಯೆ 345 ಆಗಿದ್ದು ಅದರಲ್ಲಿ 171 ಪುರುಷರು ಮತ್ತು 174 ಮಹಿಳೆಯರು ಇದ್ದಾರೆ. ಈ ಗ್ರಾಮದ ಅಕ್ಕಪಕ್ಕದ ಗ್ರಾಮಗಳಾಗಿ ಹುಣಸೆಹಳ್ಳಿ, ನಾರಾಯಣಪುರ, ಹೇರೂರು, ಕುಂಟಯ್ಯನ ಹಟ್ಟಿ, ಯರವರಹಳ್ಳಿಗಳು ಕಂಡುಬರುತ್ತವೆ. ಈ ಭಾಗದಲ್ಲಿ ಕೆಂಪು ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಎರೆಮಣ್ಣು ಸಹ ಅಲ್ಲಲ್ಲಿ ಕಂಡುಬರುತ್ತದೆ. ಈ ಗ್ರಾಮದ ಮುಂಭಾಗದಲ್ಲಿ ಸುವರ್ಣಮುಖಿ ನದಿಯು ಹಾದು ಹೋಗುತ್ತದೆ.

**ಧಾರ್ಮಿಕ ನೆಲೆಯಲ್ಲಿ ದಂಡಿಕೆರೆ:**

ದಂಡಿಕೆರೆ ಗ್ರಾಮವನ್ನು ಧಾರ್ಮಿಕವಾದ ಹಿನ್ನೆಲೆಯಲ್ಲಿ ನೋಡುವುದಾದರೆ ತನ್ನದೇ ಆದ ವೈಶಿಷ್ಟ್ಯತೆಯಿಂದ ಹಾಗೂ ಆಚರಣೆಗಳಿಂದ ವಿಶಿಷ್ಟತೆಯ ಮಹತ್ವವನ್ನು ಹೊಂದಿದೆ ಎಂದು ಹೇಳಬಹುದು.

**ದೇಗುಲಗಳು:**

ದಂಡಿಕೆರೆ ಗ್ರಾಮದಲ್ಲಿ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿಯ ದೇವಸ್ಥಾನ ಮಾತ್ರ ಕಂಡುಬರುತ್ತದೆ. ಏಕೆಂದರೆ ಈ ಗ್ರಾಮದಲ್ಲಿರುವ ಏಕೈಕ ದೇಗುಲ ಇದಾಗಿದೆ. ಇದು ಶಿವಲಿಂಗ ರೂಪವಾಗಿದೆ. ಈ ದೇವಸ್ಥಾನದಲ್ಲಿನ ಮೂರ್ತಿ ಉದ್ಭವ ಮೂರ್ತಿ ಎಂದು ಈ ಗ್ರಾಮದ ಹಿರಿಯರಿಂದ ತಿಳಿದುಬಂದಿತು. ಈ ಕುರಿತು ಹಿರಿಯರು ಹೇಳುವಂತೆ ಬಹಳ ವರ್ಷಗಳ ಹಿಂದೆ ಒಬ್ಬ ವ್ಯಕ್ತಿಯು ಅವರ ಊರಿಗೆ ದೇವಸ್ಥಾನದ ಮೂರ್ತಿ ಸ್ಥಾಪನೆಗಾಗಿ ಮೂರು ಬೆನವ (ದೇವರಕಲ್ಲು )ಗಳನ್ನು ಕೊಂಡೊಯ್ಯುವಾಗ ನಡುರಾತ್ರಿಯಾಯಿತೆಂದು, ಈ ದಿನದ ರಾತ್ರಿಯ ವಿಶ್ರಾಂತಿಯನ್ನು ಪಡೆದು ನಂತರ ಪ್ರಯಾಣ ಮುಂದುವರೆಸೋಣ ಎಂದು ವಿಶ್ರಾಂತಿಯ ಸಲುವಾಗಿ ನಿದ್ರೆಗೆ ಜಾರಿದನು. ಅವನು ತಂದಿದ್ದ ಮೂರು ಬೆನವ ಕಲ್ಲುಗಳನ್ನು ಒಂದು ಬಟ್ಟೆಯ ಗಂಟಿನಲ್ಲಿ ಕಟ್ಟಿ ಮಲಗಿದ್ದನು. ಅಂದು ರಾತ್ರಿ ಅಲ್ಲಿ ನಡೆದ ಸಂಗತಿ ಎಲ್ಲರನ್ನೂ ಬೆರಗಾಗಿಸುತ್ತದೆ. ಆ ಬಟ್ಟೆ ಗಂಟಿನಲ್ಲಿರುವ ಒಂದು ಬೆನವ ಉರುಳಿ ಈ ಸ್ಥಳದಲ್ಲಿ ನೆಲೆ ನಿಂತಿತು. ಆ ಸ್ಥಳವೇ ಈ ದಂಡಿಕೆರೆ, ಅಂದು ಉರುಳಿದ ಬೆನವವೇ ಇಂದು ನಾವು ಪೂಜಿಸುವ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿ ಎಂದು ಹೇಳಿದರು. ಈ ದೇವರಿಗೆ ಅಭಿಮುಖವಾಗಿ ನಂದಿ ವಿಗ್ರಹವು ಕಂಡುಬರುತ್ತದೆ.

ಉಳಿದ ಇನ್ನೆರಡು ಕಲ್ಲುಗಳಲ್ಲಿ ಒಂದು ಕಲ್ಲಿನ ಬೆನವ ಸಿಡಿದು ಕೂಡ್ಲಹಳ್ಳಿ ಊರಿನಲ್ಲಿ ಇದೇ ದೇವರ ಹೆಸರಿನಲ್ಲಿ ನೆಲೆ ನಿಂತಿದೆ. ಹಾಗೆ ಇನ್ನೊಂದು ಕಲ್ಲಿನ

ಬೆನವ ಕಾಟನಾಯಕನಹಳ್ಳಿ ಎಂಬ ಊರಿನಲ್ಲಿ ಶ್ರೀ ಪಾರ್ಥಲಿಂಗೇಶ್ವರ ಎಂಬ ಹೆಸರಿನಲ್ಲಿ ಆರಾಧ್ಯದೈವವಾಗಿ ಪೂಜಿಸಲ್ಪಡುತ್ತಿದೆ. ಈ ರೀತಿ ಬೆನವ ಕಲ್ಲುಗಳು ಸಿಡಿಯುವ ಸಂದರ್ಭದಲ್ಲಿ ಇಡೀ ಊರು ಶಬ್ದ ಮತ್ತು ಧೂಳಿನಿಂದ ಆವರಿಸಿತ್ತು ಎಂದು ಹಿರಿಯರು ಮತ್ತು ಜನಪದರು ಹೇಳುತ್ತಾರೆ. ಇನ್ನು ನಮ್ಮ ಊರಿನಲ್ಲಿರುವ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿ ದೇಗುಲವನ್ನು ಶ್ರೀ ಮಾರ್ಕಂಡೇಯ ಎಂಬ ಆದಿವಾಲ ನಿವಾಸಿಯವರು ಇದನ್ನು ನಿರ್ಮಿಸಿ ಜೀರ್ಣೋದ್ಧಾರಕ್ಕೆ ನೆರವಾಗಿದ್ದಾರೆ. ಇವರು ಇಂದಿಗೂ ಸಹ ಪ್ರತೀ ಹುಣ್ಣಿಮೆಗೆ ಇಲ್ಲಿಗೆ ಬಂದು ಸ್ವಾಮಿಯ ಕೃಪೆಗೆ ಪಾತ್ರರಾಗಿ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡುತ್ತಾರೆ. (ಇವರು ಇಹಲೋಕ ತ್ಯಜಿಸಿದ ನಂತರ ಅವರ ಕುಟುಂಬದವರು ಇದನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ).

ಇನ್ನು ದೇವರ ಆರಾಧನೆಯ ಕುರಿತು ಹೇಳಬೇಕೆಂದರೆ ಶ್ರೀ ಪಾರ್ಥಲಿಂಗೇಶ್ವರ ದೇವರಿಗೆ ಹೆಚ್ಚಾಗಿ ಕಾಡು ಹೂಗಳು ಎಂದರೆ ಪ್ರಿಯವೆಂದು ತಿಳಿದುಬರುತ್ತದೆ. ದಿನನಿತ್ಯವೂ ಹೊಳೆಯ ನೀರಿನಿಂದ ದೇವರಿಗೆ ಅಭಿಷೇಕ ಮಾಡುತ್ತಾರೆ. ಈ ನೀರನ್ನು ದೇವರ ಪೂಜಾರಿಯು ಬರಿಗಾಲಿನಲ್ಲಿ ಹೊಳೆಗೆ ಹೋಗಿ ಹೊಳೆಯ ನೀರನ್ನು ಹಾಗೂ ಅಲ್ಲಿನ ಕಾಡು ಹೂಗಳಾದ ತಂಟೆ ಹೂ, ಬಿಲ್ವಪತ್ರೆ, ತುಂಬೆ, ಬನ್ನಿಪತ್ರೆ, ದಾಸವಾಳ, ಕಣಗಿಲೆ, ತುಳಸಿ, ಬೇಟೆ ಸೊಪ್ಪು ಇವುಗಳನ್ನು ತಂದು ಪೂಜೆ ಮಾಡುತ್ತಾರೆ. ಹಾಗೆಯೇ ಈ ದೇವರಿಗೆ ಯಾವುದೇ ರೀತಿಯ ಕಟ್ಟಿದ ಹೂಗಳಿಂದ ಅಲಂಕರಿಸುವುದಿಲ್ಲ. ಏಕೆಂದರೆ ಅದು ದೇವರಿಗೆ ಅರ್ಪಣೆಯಾಗುವುದಿಲ್ಲ ಎಂಬ ನಂಬಿಕೆಯಿದೆ. ದೇವರ ನೈವೇದ್ಯಕ್ಕೆಂದು ತಂಬಿಟ್ಟು, ಬಾಳೆಹಣ್ಣು, ತೆಂಗಿನಕಾಯಿಯನ್ನು ಅರ್ಪಿಸುತ್ತಾರೆ. ಈ ದೇವರಿಗೆ ತುಪ್ಪದ ದೀಪವನ್ನು ಮಾತ್ರ ಹಚ್ಚಲಾಗುತ್ತದೆ.

ವಿಶೇಷವೆಂದರೆ ಇಲ್ಲಿನ ಈ ದೇವರಿಗೆ ಪೂಜಾರಿಗಳು ಯಾದವ (ಗೊಲ್ಲ ) ಸಮುದಾಯದವರು. ಇವರು ಬೇರೆ ಊರಿನಿಂದ ಬಂದು ಪೂಜೆ ಮಾಡುತ್ತಾರೆ. ಈ ಊರಿನ ಸ್ಥಳೀಕರು ಕೇವಲ ಭಕ್ತಾದಿಗಳೇ ಹೊರತು ಪೂಜಾರಿಗಳಲ್ಲ. ಇದರಿಂದ ನಾಮ, ಕುಲ, ಜಾತಿಗಳ ಹೆಸರಿನಲ್ಲಿ ಕಚ್ಚಾಡುವ ಜನರ ನಡುವೆ ಇಲ್ಲಿನ ಜನರು ಜಾತಿಗಳ ವೈಮನಸ್ಸು ತೊರೆದು ಸಾಮರಸ್ಯದಿಂದ ಸಹಬಾಳ್ವೆಯಿಂದ ದೇವರನ್ನು ಪೂಜಿಸಿ ಆರಾಧಿಸುವುದನ್ನು ನಾವು ನೋಡಬಹುದು.

ಈ ಊರಿನಿಂದ ಸುಮಾರು ಒಂದು ಕಿ.ಮೀ ದೂರದಲ್ಲಿ ದಂಡಪ್ಪ ದೇವರಗುಡಿ ಇದೆ. ಪೂರ್ವಕಾಲದಲ್ಲಿ ಈ ದೇವರ ಪೂಜಾ ಕೆಲಸಗಳನ್ನು ನಿರ್ವಹಿಸುತ್ತಿದ್ದ ದಂಡಪ್ಪ ಎಂಬುವವರು ಇಹಲೋಕ ತ್ಯಜಿಸಿದ ನಂತರ ಇವರು ಐಕ್ಯವಾದ ಸ್ಥಳವನ್ನು ಒಂದು ಪುಟ್ಟದೇವಾಲಯದ ರೀತಿ ನಿರ್ಮಿಸಿ ಜನರು ಇಂದಿಗೂ ಪೂಜ್ಯ ಭಾವನೆಯಿಂದ ಪೂಜಿಸುತ್ತಾರೆ. ಈ ದಂಡಪ್ಪ ಎನ್ನುವ ವ್ಯಕ್ತಿಯು ಗೊಲ್ಲ ಸಮುದಾಯದವರು.

**ಆಚರಣೆಗಳು:**

ಈ ಊರಿನಲ್ಲಿ ನಾಡಿನ ಎಲ್ಲಾ ಪ್ರಮುಖ ಹಬ್ಬಗಳನ್ನು ಆಚರಿಸುತ್ತಾರೆ. ಆದರೆ ಗಣೇಶಚತುರ್ಥಿಯನ್ನು ಆಚರಣೆ ಮಾಡುವುದಿಲ್ಲ. ಇದಕ್ಕೆ ಕಾರಣವನ್ನು ಮುಂದಿನ ಭಾಗದಲ್ಲಿ ನೀಡಲಾಗಿದೆ.

ದೀಪಾವಳಿ: ದೀಪಾವಳಿ ಹಬ್ಬವನ್ನು ಈ ಊರಿನಲ್ಲಿ ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ಅಂದಿನ ದಿನದಂದು ದೇವಾಲಯದಲ್ಲಿ ಸಡಗರ ಸಂತಸ ತುಂಬಿರುತ್ತದೆ. ದೀಪಾವಳಿ ಹಬ್ಬ ಆಚರಣೆ ಮಾಡುವ ಒಂಬತ್ತು ದಿನಗಳ ಪೂರ್ವದಲ್ಲಿ ಊರಿನಲ್ಲಿರುವ ಯುವತಿಯರು ಹಾಗೂ ಹೆಣ್ಣು ಮಕ್ಕಳು, ಆ ಊರಿನ ಗೌಡರ ಮನೆಯ ಅಂಗಳದಲ್ಲಿ ಶ್ರೀ ಗೌರಿ ದೇವಿಯನ್ನು ಕೂರಿಸಿ ಒಂಬತ್ತು ದಿನಗಳವರೆಗೆ ಪೂಜಿಸುತ್ತಾರೆ. ನಂತರ ಬರುವ ಹುಣ್ಣಿಮೆ ದಿನದಂದು ಅನ್ನ ಸಂತರ್ಪಣೆ ಇರುತ್ತದೆ. ಆ ಹುಣ್ಣಿಮೆ ದಿನದಂದು ಆ ಗೌರಿ ದೇವಿಯ ಜೊತೆ ಜೇಡಿ ಮಣ್ಣಿನ ಸಹಾಯದಿಂದ ಒಂದು ಸ್ತ್ರೀ ದೇವತೆಯ ಆಕೃತಿ ರಚಿಸಿ ಅದನ್ನು ಪೂಜಿಸುತ್ತಾರೆ. ನಂತರ ದೀಪಾವಳಿ ಹಬ್ಬದ ದಿನ ಗೌರಿ ದೇವಿಯನ್ನು ನೀರಿಗೆ ವಿಸರ್ಜನೆ ಮಾಡುತ್ತಾರೆ. ಅಂದು ರಾತ್ರಿ ಊರಿನಲ್ಲಿರುವ ಎಲ್ಲಾ ಜಾನುವಾರುಗಳನ್ನು ಸಿಂಗರಿಸಿ ಕಿಚ್ಚು ಹಾಯಿಸುತ್ತಾರೆ. ಮತ್ತು ದೀಪಾವಳಿ ಹಬ್ಬದ ನಂತರದ ದಿನದಂದು ಜೇಡಿ ಮಣ್ಣಿನಿಂದ ಮೂಡಿದ ಆಕೃತಿಯ ದೇವಿ ಸ್ವರೂಪವನ್ನು ತಂಟಿಗಿಡದ ಅಡಿಯಲ್ಲಿ ಇಟ್ಟು ಪೂಜಿಸಿ ಅಲ್ಲಿಯೇ ಬಿಟ್ಟು ಬರುತ್ತಾರೆ. ಇದು ದೀಪಾವಳಿಯ ಹಬ್ಬದ ವಿಶೇಷತೆ.

ಹೊಳೆ ಮುಳುಗು ಹಬ್ಬ (ಕಡೆ ಶ್ರಾವಣ): ಇನ್ನು ವರ್ಷದಲ್ಲಿ ಬರುವ ಎಲ್ಲಾ ಮಾಸಗಳಂತೆ ಶ್ರಾವಣ ಮಾಸ ಬಂದಾಗ ಇಲ್ಲಿ ತುಂಬಾ ಆಚರಣೆಗಳು ಜರುಗುತ್ತವೆ. ಇನ್ನು ಕಡೆ ಶ್ರಾವಣದ ಸೋಮವಾರ ದಿನದಂದು ಊರಿನ ದೇವರಿಗೆ ವಿಶೇಷ ಅಲಂಕಾರ, ಪೂಜೆಗಳು ನಡೆಯುತ್ತವೆ. ಮತ್ತು ಊರಿನ ಎಲ್ಲಾ ಜನರು ಆ ಊರಿನ ಹೊಳೆಯಲ್ಲಿ ವರ್ಷಕ್ಕೆ ಒಮ್ಮೆಯಾದರೂ ಆ ದಿನ ಅಲ್ಲಿಯೇ ಸ್ನಾನಗಳನ್ನು ಮಾಡಿ ನಂತರ ಆ ಗಂಗಾ ದೇವಿ ಸ್ವರೂಪಳಾದ ಹೊಳೆಗೆ ಪೂಜೆ ಸಲ್ಲಿಸಿ ಬರುವುದು ಇಲ್ಲಿನ ಆಚರಣೆಯಾಗಿದೆ.

ಗಣೇಶಚತುರ್ಥಿ ಆಚರಣೆ ಯಾಕೆ ನಿಷಿದ್ಧ?: ಗಣೇಶಚತುರ್ಥಿ ಎಂದರೆ ಒಂದು ಸಡಗರ, ಸಂತಸ, ಉಲ್ಲಾಸ. ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಸಹ ಈ ಹಬ್ಬ ಮೆಚ್ಚುಗೆ ಗಳಿಸಿದೆ. ಈ ಹಬ್ಬವನ್ನು ನಾಡಿನ ಎಲ್ಲೆಡೆಯೂ ಅತೀ ವಿಜೃಂಭಣೆಯಿಂದ ಆಚರಿಸುತ್ತಾರೆ. ಇಂತಹ ಸಂದರ್ಭದಲ್ಲಿ ಈ ಊರಿನಲ್ಲಿ ಆಚರಿಸುವುದಿಲ್ಲ. ಈ ಗ್ರಾಮದಲ್ಲಿ ಗಣೇಶನನ್ನು ಪ್ರತಿಷ್ಠಾಪನೆ ಮಾಡುವುದಿಲ್ಲ. ಏಕೆಂದರೆ ಒಂದು ವೇಳೆ ಪ್ರತಿಷ್ಠಾಪನೆ ಮಾಡಿದರೆ ಊರಿನಲ್ಲಿ ಯಾರಾದರೂ ಸಾವನ್ನಪ್ಪುತ್ತಾರೆ ಎಂಬ ಆತಂಕ, ಭಯದ ವಾತಾವರಣ ಅವರನ್ನು ಆವರಿಸಿದೆ.

ಇದಕ್ಕೆ ಕೆಲವು ನಿದರ್ಶನಗಳನ್ನು ನೀಡುತ್ತಾರೆ.

ಸುಮಾರು 1980 ರ ಆಸುಪಾಸಿನಲ್ಲಿ ಗಣೇಶನ ಮೂರ್ತಿಯನ್ನು ಮೂರು ವರ್ಷಗಳವರೆಗೆ ಇಟ್ಟಾಗ ಪ್ರತೀ ವರ್ಷವೂ ಒಬ್ಬೊಬ್ಬರು ಕಾರಣವಿಲ್ಲದೆ ಅನಿರೀಕ್ಷಿತವಾಗಿ ಸಾವಿಗೀಡಾಗುತ್ತಾರೆ. ಇದರಿಂದ ಪ್ರತಿಷ್ಠಾಪನೆ ಮಾಡುವುದಿಲ್ಲ. ನಂತರ ಇದಕ್ಕೆ ನಾವೇ ತೀರ್ಮಾನ ತೆಗೆದುಕೊಳ್ಳುವುದು ಸಮಂಜಸವಲ್ಲವೆಂದು ಆ ಊರಿನ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿಯನ್ನು ಹೂವಿನ ರೂಪದಲ್ಲಿ ದೇವರ ನಿರ್ಣಯ ಬಯಸಿ ಕೇಳಿದಾಗ ದೇವರು ಸಹ ಎಡಗಡೆಯ ಪ್ರಸಾದ ನೀಡಿದ ಕಾರಣ ಇಲ್ಲಿ ಇಂದಿನವರೆಗೂ ಸಹ ಗಣೇಶನನ್ನು ಪ್ರತಿಷ್ಠಾಪನೆ ಮಾಡುವುದಿಲ್ಲ. ಆದರೆ ಅದು ಕಾಕತಾಳಿಯವೋ? ಅಥವಾ ಮೂಢನಂಬಿಕೆಯೋ ಎಂಬುದನ್ನು ಮನಗಾಣಬಹುದು. ಹಾಗೇ ನೋಡಿದರೆ ಪೂರ್ವದಲ್ಲಿ ಸುತ್ತ ಮುತ್ತಲಿನ ಹಳ್ಳಿಗಳಿಗೆ ಹೋಲಿಸಿ ನೋಡಿದರೆ ಈ ಊರಿನಲ್ಲಿ ಅತೀ ದೊಡ್ಡ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತಿದ್ದರೆಂದು ಹಿರಿಯರು ಹೇಳುತ್ತಾರೆ.

ನಂಬಿಕೆ: ಈ ಊರಿನಲ್ಲಿ ಕೋಳಿ ಸಾಕಾಣಿಕೆಯನ್ನು ನಿಷೇಧಿಸಲಾಗಿದೆ. ಇಲ್ಲಿ ಯಾರು ಕೂಡ ಕೋಳಿಯನ್ನು ಸಾಕುವುದಿಲ್ಲ. ಏಕೆಂದರೆ ಈ ಹಿಂದೆ ಪೂರ್ವದಲ್ಲಿ ಇಲ್ಲಿ ಬ್ರಾಹ್ಮಣರು ವಾಸ ಮಾಡುತ್ತಿದ್ದರಂತೆ ಮತ್ತು ಈ ಊರಿನ ದೇವರಿಗೆ ಕೋಳಿ ಎನ್ನುವುದು ಬಾಹಿರವಾಗಿದೆ. ಆದ್ದರಿಂದ ಇಲ್ಲಿ ಕೋಳಿ ಸಾಕಾಣಿಕೆ ಕಂಡುಬರುವುದಿಲ್ಲ. ಆದರೆ ಮನೆಯಲ್ಲಿ ಕೋಳಿಯನ್ನು ಒಳಗೊಂಡ ಊಟ ತಯಾರಿಸಿ ಸೇವಿಸಬಹುದು ಎನ್ನುವುದು ಜನರ ನಂಬಿಕೆ. ಆದರೆ ಇದು ಯಾವ ರೀತಿಯ ನಂಬಿಕೆ, ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಕಾಡುವುದಂತು ಸತ್ಯ.

**ಸಾಮಾಜಿಕವಾಗಿ ದಂಡಿಕೆರೆ:**

ಈ ಗ್ರಾಮದಲ್ಲಿ ಕೇವಲ ಎರಡು ಸಮುದಾಯಗಳು ಕಂಡುಬರುತ್ತವೆ. ಒಂದು ನಾಯಕ ಸಮುದಾಯ (ಪರಿಶಿಷ್ಟ ಪಂಗಡ) ಮತ್ತೊಂದು ಆದಿ ಕರ್ನಾಟಕ (ಪರಿಶಿಷ್ಟ ಜಾತಿ) ಎಂಬ ಸಮುದಾಯಗಳು ವಾಸವಾಗಿವೆ. ಪರಸ್ಪರ ಸಹಕಾರದಿಂದ ಹಬ್ಬ ಹರಿದಿನಗಳನ್ನು ಒಟ್ಟಿಗೆ ಆಚರಿಸುತ್ತಾರೆ.

**ರಾಜಕೀಯ ನೆಲೆಯಲ್ಲಿ ದಂಡಿಕೆರೆ:**

ನಮ್ಮೂರಿನ ಹೆಮ್ಮೆಯ ರಾಜಕಾರಣಿಯವರಾದ ಶ್ರೀ ಸಾ ಲಿಂಗಯ್ಯನವರು ಡಿ. ದೇವರಾಜ್ ಅರಸರ ಸರ್ಕಾರ ಆಡಳಿತ ಅವಧಿಯಲ್ಲಿ ಶಿರಾ ವಿಧಾನಸಭಾ ಕ್ಷೇತ್ರದ ಶಾಸಕರಾಗಿ (ಎಂ.ಎಲ್.ಎ.) ಆಯ್ಕೆಯಾಗಿ ಕಾರ್ಯನಿರ್ವಹಿಸಿದ್ದು ನಮ್ಮೂರಿಗೆ ಒಂದು ಹೆಮ್ಮೆಯ ವಿಷಯವಾಗಿದೆ.

**ಶೈಕ್ಷಣಿಕವಾಗಿ ದಂಡಿಕೆರೆ:**

ಈ ಗ್ರಾಮದಲ್ಲಿ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಪ್ರಾಥಮಿಕ ಕಿರಿಯ ಪಾಠ ಶಾಲೆ ಇದೆ. ಮುಂದಿನ ಆರನೇ ಹಾಗೂ ಏಳನೇ ತರಗತಿಯ ವಿದ್ಯಾಭ್ಯಾಸಕ್ಕಾಗಿ ಪಕ್ಕದ ಹುಣುಸೆಹಳ್ಳಿಗೆ ಹೋಗಬೇಕಾಗುತ್ತದೆ. ಎಂಟನೇ, ಒಂಭತ್ತನೇ, ಹತ್ತನೇ ತರಗತಿಯ ವ್ಯಾಸಾಂಗಕ್ಕೆ ನಾರಾಯಣಪುರಕ್ಕೆ ಹೋಗಬೇಕಾಗುತ್ತದೆ. ಪದವಿ ಹಾಗೂ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಶಿರಾ ಮತ್ತು ತುಮಕೂರು ಜಿಲ್ಲೆ ಮುಂತಾದ ನಗರಗಳನ್ನು ಆಶ್ರಯಿಸಲಾಗಿದೆ. ಈ ಗ್ರಾಮದಲ್ಲಿ ಮೂರು ಜನರು ಓದಿ ಸರ್ಕಾರಿ ಹುದ್ದೆಯನ್ನು ಗಳಿಸಿದ್ದಾರೆ. ಸ್ನಾತಕೋತ್ತರ ಪದವಿಯನ್ನು ಮೂರು ಜನರು ಪಡೆದಿದ್ದಾರೆ. ಪದವಿ ವ್ಯಾಸಾಂಗವನ್ನು ಪೂರೈಸಿದವರು ಸುಮಾರು ಹತ್ತು ಜನರು ಕಂಡುಬರುತ್ತಾರೆ.

**ದಂಡಿಕೆರೆ ಜನರ ವೃತ್ತಿ ಮತ್ತು ಬದುಕು:**

ಈ ಗ್ರಾಮದ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿ ಕಂಡುಬರುತ್ತದೆ. ಇಲ್ಲಿ ನೀರಾವರಿ ಬೆಳೆ ಮತ್ತು ಮಳೆ ಆಧಾರಿತ ಬೆಳೆಗಳನ್ನು ಬೆಳೆಯುತ್ತಾರೆ. ಈ ಗ್ರಾಮವು ಕಲ್ಪತರು ನಾಡು ತುಮಕೂರು ಜಿಲ್ಲೆಯಲ್ಲಿ ಕಂಡುಬರುವುದರಿಂದ ಇಲ್ಲಿ ಅತಿ ಹೆಚ್ಚು ತೆಂಗು ಬೆಳೆಯನ್ನು ಬೆಳೆಯುತ್ತಾರೆ. ಈಗ ಈ ಗ್ರಾಮದ ಪ್ರಮುಖ ಬೆಳೆಗಳನ್ನು ನೋಡೋಣ. ರಾಗಿ, ನೆಲಗಡಲೆ, ಭತ್ತ, ಜೋಳ, ಸಜ್ಜೆ, ಅವರೆ, ನವಣೆ, ಮತ್ತು ಕೊರಲೆ ಮುಂತಾದ ಸಣ್ಣ ಧಾನ್ಯಗಳು ಇಲ್ಲಿನ ಪ್ರಮುಖ ಬೆಳೆಗಳು.

ತೋಟಗಾರಿಕೆ ಬೆಳೆಗಳು: ತೆಂಗು, ಅಡಿಕೆ, ಬಾಳೆ, ಮಾವು, ಸಪೋಟ, ತರಕಾರಿ ಬೆಳೆಗಳು, ಹೂವುಗಳು ಮತ್ತು ಇತರೆ ವಾಣಿಜ್ಯ ಬೆಳೆಗಳು ಕಂಡುಬರುತ್ತವೆ. ಇಲ್ಲಿನ ಮಣ್ಣು ಕೆಂಪು ಮಣ್ಣು, ಮರಳು ಜೇಡಿ ಮಿಶ್ರಿತ ಮಣ್ಣು, ಎರೆಮಣ್ಣು ಪ್ರಮುಖವಾಗಿದೆ. ಮಣ್ಣಿಗನುಗುಣವಾದ ಬೆಳೆಗಳನ್ನು ಬೆಳೆಯುವುದನ್ನು ಕಾಣಬಹುದು.

ಉದ್ಯೋಗ: ಇಲ್ಲಿನ ಜನರು ತಮ್ಮ ಬದುಕಿಗಾಗಿ ಒಂದೆಡೆ ಕೃಷಿಯನ್ನು (ವ್ಯವಸಾಯ) ಅವಲಂಬಿಸಿದ್ದರೆ ಇನ್ನೊಂದೆಡೆ ದಂಡಿಕೆರೆ ಗ್ರಾಮದಿಂದ 7 ಕಿ.ಮೀ ದೂರದಲ್ಲಿ ಭಾರತದ ಪ್ರಮುಖ ಕಂಪನಿಗಳಲ್ಲೊಂದಾದ 'ಇನ್ಫೋಸಿಸ್' ನ ಒಂದು ಅಂಗವಾದ 'ಸೋಲಾರ್ ಪ್ಲಾಂಟ್' ಎನ್ನುವ ಸಂಸ್ಥೆಯು ಹಲವಾರು ಜನರಿಗೆ ಉದ್ಯೋಗವನ್ನು ನೀಡಿದೆ. ಈ ಸಂಸ್ಥೆಯು ನಮ್ಮೂರಿನ ಪಕ್ಕದಲ್ಲಿರುವುದು ನಮಗೆ ತುಂಬಾ ಹೆಮ್ಮೆಯ ಮತ್ತು ಅನುಕೂಲ ಸಂಗತಿಯಾಗಿದೆ. ಹಾಗೂ ನಮ್ಮೂರಿನ ಉದ್ಯೋಗಿಗಳು ಉದ್ಯೋಗವನ್ನರಸಿ ಪಟ್ಟಣಗಳಿಗೆ ಹೋಗುವುದರ ಬದಲು ಮನೆಯ ಬಾಗಿಲ ಬಳಿಯೇ ಕೆಲಸವಿರುವುದು ನಮ್ಮೆಲ್ಲರ ಭಾಗ್ಯವಾಗಿದೆ.

ಈ ಸಂಸ್ಥೆಯು ತನ್ನ ಸುತ್ತಮುತ್ತಲಿನಲ್ಲಿರುವ ಊರುಗಳ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಆ ಶಾಲೆಗಳ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತಿದೆ. ಇತ್ತೀಚಿನ ದಿನಗಳಲ್ಲಿ ಶಾಲೆಗಳ ಕೊಠಡಿಗಳ ದುರಸ್ತಿ ಮಾಡಿಸಿದೆ ಮತ್ತು ಈಗ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದ ಜೊತೆ ಮಕ್ಕಳು ಕಲಿಯಬೇಕು ಎಂದು ಶಿಕ್ಷಕರ ನೇಮಕಾತಿಗೆ ಮುಂದೆ ಬಂದು ನಿಂತಿದೆ. ಹೀಗೆ ಈ ನಮ್ಮ ದೇಶದ ಹೆಮ್ಮೆಯ ಸಂಸ್ಥೆಯಾದ ಇನ್ಫೋಸಿಸ್ ತನ್ನ ಏಳಿಗೆಯ ಜೊತೆಗೆ ಸುತ್ತಲಿನ ವಾತಾವರಣದ ಏಳಿಗೆಗೆ ಶ್ರಮಿಸುತ್ತಿದೆ.

**ಪರಾಮರ್ಶನ ಗ್ರಂಥಗಳು:**

1. ಕೇಶವಶರ್ಮ ಕೆ., (2021), ಸಾಹಿತ್ಯದ ವಿವಿಧ ಸಂಕಥನಗಳು, ಸುವ್ವಿ ಪಬ್ಲಿಕೇಷನ್ಸ್, ಶಿಕಾರಿಪುರ.
2. ಮಹಂತೇಶ ಎನ್.ಎಸ್., (2015), ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ರೇಣುಕಾ ಪ್ರಕಾಶನ, ಚಿತ್ರದುರ್ಗ.
3. ರಹಮತ್ ತರೀಕೆರೆ, (2019), ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.